

ಚಿಕಿತ್ಸೆ ನೀಡಿದರೆ ಮಾತನಾಡಬಹುದು ಎಂಬ ವೈದ್ಯರು ಭರವಸೆ ನೀಡುತ್ತಾರೆ. ಅಮೀರ್‌ನ ಮನಸ್ಸು ಗೊಂದಲದ ಗೂಡಾಗುತ್ತದೆ. ಕೋಪ, ಉದ್ರೇಕಗಳಿಗೆ ಒಳಗಾಗಿ ಮನಸ್ಸಿನ ನಿಯಂತ್ರಣ ಕಳೆದುಕೊಳ್ಳುತ್ತಾನೆ. ಅಕ್ಷರಶಃ ಹುಚ್ಚನಂತೆ ವರ್ತಿಸುತ್ತಾನೆ. ಮನೆಯಲ್ಲಿ ಸಾಕಿದ್ದ ಕೋಳಿ, ಪಾರಿವಾಳಗಳನ್ನು ಎತ್ತಿ ಹೊರಕ್ಕೆ ಎಸೆಯುತ್ತಾನೆ. ಅವನ ಕೂಗಾಟಗಳಿಂದ ಅಕ್ಷಿಯ ತಾಯಿಗೆ ತನ್ನ ಮಗನ ದುರ್ವತನೆ ಮತ್ತು ಆಸ್ಪತ್ರೆಗೆ ಸೇರಲು ಕಾರಣವೇನು ಎಂಬುದು ಗೊತ್ತಾಗುತ್ತದೆ. ಅಮೀರನ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡು ಮನೆ ಬಿಟ್ಟು ಆಸ್ಪತ್ರೆಗೆ ಬರುತ್ತಾಳೆ.

ಅಮೀರನೂ ಆಸ್ಪತ್ರೆಗೆ ಧಾವಿಸುತ್ತಾನೆ. ಅಲ್ಲಿ ಅಕ್ಷಿಯ ಮಂಚ ಖಾಲಿಯಾಗಿದೆ. ಹೆಣ ಶವಾಗಾರದಲ್ಲಿದೆ. ಅವನ ಸಾವಿನೊಂದಿಗೆ ಅಕ್ಕ ಜೈಲಿನಿಂದ ಹೊರಬರುವ ದಾರಿ ಮುಚ್ಚಿಹೋಗಿರುತ್ತದೆ.

ಅಮೀರ್‌ನ ಹತಾಶೆ, ಅಕ್ಷಿಯ ತಾಯಿ ಮತ್ತು ಮುಗ್ಧ ಮಕ್ಕಳ ಅಸಹಾಯಕತೆಗಳನ್ನು ಹೇಳಲು ಮುಂಬಯಿ ಹೋಳಿ ಮೆರವಣಿಗೆ ದೃಶ್ಯಗಳನ್ನು ಮಜಿದಿ ಬಳಸಿಕೊಂಡಿದ್ದಾರೆ. ವಾದ್ಯಗಳ ಸದ್ದು, ಬಣ್ಣಗಳ ಎರಚಾಟ ಇತ್ಯಾದಿ ದೃಶ್ಯಗಳನ್ನು ಬಳಸಿಕೊಂಡು ಸಾವನ್ನು ಮರೆತು ಭವಿಷ್ಯ(ಬದುಕಿನ)ದ ದಾರಿಯತ್ತ ನಡೆಯುವ ಅನಿರ್ವಾಯತೆಯನ್ನು ಸಾಂಕೇತಿಕವಾಗಿ ಹೇಳಿದ್ದಾರೆ. ಶವಾಗಾರದ ಹೊರಗೆ ಮೆರವಣಿಗೆ ನೋಡುತ್ತ ನಿಂತಿದ್ದ ಅಕ್ಷಿಯ ಸಣ್ಣ ಮಗಳ ಕೈಹಿಡಿದು ಅಮೀರ ಮುಂದೆ ನಡೆಯುವ ದೃಶ್ಯದ ಮೂಲಕ ಚಿತ್ರ ಕೊನೆಯಾಗುತ್ತದೆ.

ಮುಂಬಯಿಯ ಅಗಾಧತೆಯನ್ನು ತೆರೆಯ ಮೇಲೆ ದೊಡ್ಡದಾಗಿ ಕಟ್ಟಿಕೊಡಲು ನೆರವಾಗಿರುವುದು ಅನಿಲ್ ಮೆಹ್ತಾ ಅವರ ಛಾಯಾಗ್ರಹಣ. ಎ.ಆರ್. ರೆಹಮಾನ್‌ರ ಹಿನ್ನೆಲೆ ಸಂಗೀತ ಚಿತ್ರಕ್ಕೆ ಪೂರಕವಾಗಿದೆ. ಅಮೀರ್ ಪಾತ್ರದಲ್ಲಿ ಇಶಾನ್ ಖಟ್ಟರ್ (ನಟ ಶಾಹಿದ್ ಕಪೂರ್ ತಮ್ಮ) ಉತ್ಸಾಹದ ಬುಗ್ಗೆ. ಅವರು ಮೊದಲ ಚಿತ್ರದಲ್ಲೇ ಇಷ್ಟವಾಗುತ್ತಾರೆ. ತಾರಾ ಪಾತ್ರದಲ್ಲಿ ಮಾಳವಿಕಾ ಮೋಹನನ್, ಗೌತಮ್ ಘೋಶ್, ಅಕ್ಷಿಯ ತಾಯಿ ಪಾತ್ರದಲ್ಲಿ ಕನ್ನಡತಿ ಜಿ.ವಿ. ಶಾರದ ಪ್ರಬುದ್ಧ ಅಭಿನಯ ನೀಡಿದ್ದಾರೆ.

❀